ಮೈಸೂರ ಗೆಜಿಟ.

ನಂ. 22 ಸರ್ಕಾರದಿಂದ ಫಾಯಿಷ್ ಆದ್ದು. ಸ್ಯ 1884.

ಬೆಂಗಳೂರು, ಶನಿವಾರ, ಮೇ ತಾ॥ 31, ಸ್ಯ 1884.

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಪ್ರತ್ಯೇಕವಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದೀರ್ವಾರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜೀಯವರು, ಸರ್ವೆ ವ ಸೆಟಲ್‌ಮೆಂಟ್ ಕಮ್ಮಿಷನರು, ಇನಾಂ ಸೂಪರ್ಟೆಂಡೆಂಟರು, ಕಾಂ ಟ್ರೋಲರವರು, ಮಣಿ ಆರ್ಡರ್ ಕಂಟ್ರೋಲರ್, ಪಬ್ಲಿಕ್ ವರ್ಕ್ಸ್ ಆಫೀಸರ್‌ಗಳು, ಮಿಲಿಟೇರಿ ಸಿಕ್ರಟೆರಿಯವರು, ರಿಜಿಸ್ಟ್ರೇರ್ ಇನ್‌ಸ್ಪೆಕ್ಟರ್ ಜನರಲ್ಲವರು, ವಿದ್ಯಾಶಾಲೆ ಡೈರೆಕ್ಟರು, ಅಂಚೆ ಬಕ್‌ಷೀರು, ಮ್ಯುನಿಸಿಪೆಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟ್ ವ ಸೆಷ್ಷ ಜಡ್ಜೀರು, ಡಿ॥ ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೊಲೀಸ್ ಸೂಪರ್ಟೆಂಡೆಂಟರು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟ್ಆಫೀಸ್ ನೋಟೀಸುಗಳು.

3ನೇ ಭಾಗ–ಶ್ರೀಮ್ಮ ಮಹಾರಾಜ ರಾಜಾಸಾಹೇಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷ್ಷಗಳು, 1884ನೇ ಇಸವಿಯ ಮೈಸೂರು ಚೀಫ್ ಕೋರ್ಟು ರೆಗ್ಯೂಲೇಷ್ಷ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲಾ.

1ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೇಬರವರ ದೀವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 23ನೇ ಮೇ 1884.

ನಂ. 40—ಶ್ರೀಮ್ಮಮಹಾರಾಜರವರು ಅಪ್ಪಣೇ ಕೊಡುವದೇನಂದರೆ, 1884ನೇ ಮೇ 28ನೇ ಮಕ್ಕುಂ ಲಗಾಯತ್ ಮೈಸೂರು ಸಂಸ್ಥಾನಕ್ಕೆ, "ಮೈಸೂರು ಶೀಮೆಯ ಚೀಫ್ ಕೋರ್ಟು" ಎಂತ ಕರೆಯಲ್ಪಡತಕ್ಕ ಒಂದು ಚೀಫ್ ಕೋರ್ಟು ಏರ್ಪಾಡು ಮಾಡಲ್ಪಡತಕ್ಕದ್ದು.

2. ಶ್ರೀಮ್ಮಮಹಾರಾಜರವರು ಮತ್ತೂ ಅಪ್ಪಣೆ ಕೊಡುವದೇನಂದರೆ, ಮದರಾಸ್ ಸಿವಿಲ್ ಸರ್ವಿಸ್ಸಿಗೆ ಸೇರಿದ ಮೆ॥ ಚಾರ್ಲ್ಸ್ ಚಾರ್ಜ್ಜ್, ಪ್ಲೂಮರ್‌ಯವರು ಸದರೀ ಚೀಫ್ ಕೋರ್ಟಿನ ಚೀಫ್ ಜಡ್ಜೀರಾಗಿಯೂ, ಮೆ॥ ಟಿ. ಆರ್. ಎ. ತಂಬುಶಟ್ಟರು, ಮತ್ತು ಮೆ॥ ಎ. ರಾಮಚಂದ್ರಯ್ಯರು ಯಿತರ ಜಡ್ಜೀಗಳಾಗಿಯೂ ಇರುವಂತೆ ಮೊಕರರ್ ಮಾಡುತ್ತಾರೆ–

"ಖಮೋಜೇಬ್ ಹುಕ್ಕುಂ,"

ಕೆ. ಶೇಷಾದ್ರಿ ಅಯ್ಯರ್,

ದೀರ್ವಾ.